**ಚಾಸಾ- 1 ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಸಿಸಿ. 12817/2017**

| | |
|---|---|
| **ಸಾಕ್ಷಿದಾರರ ಹೆಸರು** | ಆದಿಮೂಲಂ. |
| **ತಂದೆಯ ಹೆಸರು** | ಬಾಲಕೃಷ್ಣ. |
| **ವಯಸ್ಸು** | 73 ವರ್ಷ |
| **ಉದ್ಯೋಗ** | ಮನೆಯಲ್ಲಿರುತ್ತೇನೆ. |
| **ವಾಸ** | ಹೆಣ್ಣೂರು ಕ್ರಾಸ್, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 19.02.2025. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನನಗೆ 1 ರಿಂದ 3ನೇ ಆರೋಪಿತರು ಗೊತ್ತು. ಅವರನ್ನು ನೋಡಿದರೆ ಗುರುತಿಸುತ್ತೇನೆ. ಅವರಲ್ಲಿ ಇಬ್ಬರು ವ್ಯಕ್ತಿಗಳನ್ನು ನೋಡಿದರೆ ಗುರುತಿರುತ್ತೇನೆ. ಆರೋಪಿತರು ಈ ದಿನ ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ. ನಮ್ಮ ಮನೆ ಕಟ್ಟುವ ಇಂಜಿನಿಯರ್ ಮೂಲಕ ಆರೋಪಿತರ ಪರಿಚಯವಾಗಿರುತ್ತದೆ. ನಮ್ಮ ಮನೆ ಕಟ್ಟುವ ಇಂಜಿನಿಯರ್ ರವರು ನನ್ನನ್ನು ಲಿಫ್ಟ್ ಮಾರುವ ಸಿಫ್ಟ್ ಕಂಪನಿಗೆ ಕರೆದುಕೊಂಡು ದಿ.24.12.2013 ರಂದು ಹೋಗಿರುತ್ತಾರೆ. ನಮ್ಮ ಇಂಜಿನಿಯರ್ ರವರು 1 ಮತ್ತು 3ನೇ ಆರೋಪಿತರನ್ನು ಪರಿಚಯ ಮಾಡಿಕೊಟ್ಟಿರುತ್ತಾರೆ. ಲಿಫ್ಟ್ ಕಂಪನಿಯವರು ಬಂದು ಲಿಫ್ಟ್ ಹಾಕುವ ಜಾಗವನ್ನು ನೋಡಿ ಅಳತೆ ಮಾಡಿಕೊಂಡು ಹೋಗಿರುತ್ತಾರೆ. ಲಿಫ್ಟ್ ನ್ನು ಹಾಕುವ ಸಂಬಂದ ರೂ.5ಲಕ್ಷ ಮೇಲ್ಪಟ್ಟು ಹಣವನ್ನು ನೀಡಲು ಒಪ್ಪಿರುತ್ತೇನೆ. ಆ ಸಂಬಂಧ ನಾನು ಮೊದಲು ರೂ.50,000/- ಮುಂಗಡ ಹಣವನ್ನು ದಿ.24.12.2013 ರಂದು ನಗದಾಗಿ ಒಂದು ಮತ್ತು ಮೂರನೇ ಆರೋಪಿತರ ಕೈಗೆ ಕೊಟ್ಟಿರುತ್ತೇನೆ. ದಿ.16.04.2014 ರಂದು ರೂ.1,40,000/- ಹಣವನ್ನು ಚೆಕ್ ಮೂಲಕ ನೀಡಿರುತ್ತೇನೆ. ಅದೇ ದಿನ ಪುನಃ ರೂ.1ಲಕ್ಷದ ಚೆಕ್ಕನ್ನು ನೀಡಿರುತ್ತೇನೆ. ಅದೇ ದಿನಾಂಕದಂದು ರೂ.50,000/- ಮತ್ತುರೂ.25,000/-ಗಳ ಎರಡು ಚೆಕ್ಕುಗಳನ್ನು

**ಚಾಸಾ- 1 ಪ್ರಾಸಾ-1**

ನೀಡಿರುತ್ತೇನೆ. ಒಟ್ಟಾರೆಯಾಗಿ ರೂ.4,25,000/-ಗಳನ್ನು ಒಂದು ಮತ್ತು ಮೂರನೇ ಆರೋಪಿತರಿಗೆ ನಮ್ಮ ಮನೆಗೆ ಲಿಫ್ಟ್ ನ್ನು ಅಳವಡಿಸುವ ಸಂಬಂದ ಕೊಟ್ಟಿರುತ್ತೇನೆ. ಸದರಿ ಆರೋಪಿತರು ಹಣವನ್ನು ನೀಡಿದ ನಂತರ ಒಂದು ಲಿಫ್ಟ್ ಮೋಟಾರ್ ನ್ನು ಮಾತ್ರ ತಂದು ಹಾಕಿ ಪುನಃ ಆರೋಪಿತರು ಲಿಫ್ಟ್ ನ್ನು ತಂದು ಹಾಕಿರುವುದಿಲ್ಲ. ನಾನು ಆರೋಪಿತರನ್ನು ನೀವು ನಮ್ಮ ಮನೆಗೆ ಲಿಫ್ಟ್ ನ್ನು ತಂದು ಅವಳಡಿಸಿ ಎಂದು ಕೇಳಿದಾಗ ಅವರು ಯಾವುದೇ ಪ್ರತಿಕ್ರಿಯೇ ನೀಡಿರುವುದಿಲ್ಲ ಆದ್ದರಿಂದ ನನಗೆ ಅನುಮಾನ ಬಂದು ನಾನು ದೂರನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮೂಲ ದಾಖಲಾತಿಗಳು ಇಲ್ಲದೇ ಇರುವುದರಿಂದ ಹಿ.ಸ.ಸ.ಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿರುತ್ತಾರೆ. ನೀಡಲಾಯಿತು.**

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)</u>

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**